ಎಂದು ಹೇಳಿದ್ದಾರೆ. ಆದಕಾರಣ ಈ ವರ್ಷ ರೀ ಅಪ್ರೊಪ್ರಿಯೇಟ್ ಮಾಡಿಕೊಂಡು ನಾವು 10-11 ಕೋಟಿ ರೂ. ಖರ್ಚು ಮಾಡುತ್ತೇವೆ ಎಂದು ಹೇಳಿದ್ದೇವೆ. ಇನ್ನು ಎರಡು ವರ್ಷದಲ್ಲಿ ಕೆ.ಸಿ. ರೆಡ್ಡಿಯವರ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುತ್ತೇವೆ ಎಂದು ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ನೀರಂತೂ ಕೊಟ್ಟಿಲ್ಲ. ಬ್ರೀಚ್ ಆಗಿರುವುದರಿಂದ ಅಟ್‌ಲೀಸ್ಟ್, ವಾಟರ್ ರೇಟ್ ಮತ್ತು ಲ್ಯಾಂಡ್ ರೆವಿನ್ಯೂ ಇವುಗಳಿಗಾದರೂ ರಿಯಾಯಿತಿ ನೀಡುವಿರಾ?

ಶ್ರೀ ಕೆ.ಎನ್. ನಾಗೇಗೌಡ:- ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು ಸನ್ಮಾನ್ಯ ವಿರೂಪಾಕ್ಷಪ್ಪನವರಿಗೆ ಚೆನ್ನಾಗಿ ತಿಳಿದಿದೆ. ಲಾಸ್ಟ್ ಟೇಲ್ ಎಂಡ್‌ನಲ್ಲ ಸ್ವಲ್ಪ ಭಾಗದಲ್ಲಿ ನೀರಿಗೆ ತೊಂದರೆಯಾಯಿತು. ಆದರೆ 20 ದಿವಸಕ್ಕೆ ಕೊಡುವುದಕ್ಕೆ ಬದಲಾಗಿ 24 ದಿವಸಕ್ಕೆ ಕೊಟ್ಟಿದ್ದೇವೆ. ನಾನು ಡಿ.ಸಿ. ಅವರ ಹತ್ತಿರ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಅವರ ಹತ್ತಿರ, ಇನ್‌ಕ್ಲೂಡಿಂಗ್ ಆಲ್ ಪೋಲೀಸ್ ಆಫೀಸರ್, ರೆವಿನ್ಯೂ ಆಫೀಸರ್, ಇರಿಗೇಷನ್ ಆಫೀಸರ್ ಹತ್ತಿರ ನಿನ್ನೆ ಬೆಳಿಗ್ಗೆ, ಮತ್ತು ಇವತ್ತು ಬೆಳಿಗ್ಗೆ ಮಾಡನಾಡಿದ್ದೇನೆ.

Nearlyabout 10 percent in the last tail-end of the canal...

ಸ್ವಲ್ಪ ಪ್ರಾಬ್ಲಂ ಇದೆ ಎಂದುಹೇಳಿದ್ದೇನೆ. ಅದನ್ನು ಖಂಡಿತವಾಗಿ ಸರಿಪಡಿಸುತ್ತೇವೆ.

ಮಾನ್ಯ ಸದಸ್ಯರು:- ಸರ್ವೆ ಮಾಡಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ :- ಸರ್ವೆ ಮಾಡಿಸುತ್ತೇವೆ. ಸರ್ವೆ ಮಾಡಿ what will be the next step ಎಂದು ತಿಳಿಸುತ್ತೇನೆ.

(ಅ) <u>ಗುಲ್ಬರ್ಗ ಜಿಲ್ಲೆಯ ಅಫ್ಜಲ್‌ಪುರ ತಾಲೂಕು ಬಡಾಳ್ ಗ್ರಾಮ ನಿವಾಸಿಯಾದ ಶ್ರೀ ಬಿಲ್ ಫೇಮಸ್ ಮಾಶಾಳ್ ಕಾಣೆಯಾಗಿರುವ ಬಗ್ಗೆ</u>

ಶ್ರೀ ಸೈಯದ್ ಜುಲ್ಫೀಯವರ ಹಸ್ಕಿ: ಅಧ್ಯಕ್ಷರೇ, ಮೇಲಿನ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

★ಶ್ರೀ ಎಂ.ಸಿ. ನಾಣಯ್ಯ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆ ಅಫಜಲ್‌ಪುರ ತಾಲ್ಲೂಕು ಬಡದಾಳ ಗ್ರಾಮದ ಶ್ರೀಮತಿ ಶಾರದಾಬಾಯಿ, ಕೋಂ ಪ್ರಧಾನ ಮಾಶಾಳ ಇವರು ತಮ್ಮ ಪತಿ ಶ್ರೀ ಪ್ರಧಾನ ಅಲಿಯಾಸ್ ಬಿಲ್ ಫೇಮಸ್ ಮಾಶಾಳ ಇವರು ಕಾಣೆಯಾದ ಬಗ್ಗೆ ಅಫಜಲ್‌ಪುರ ಪೋಲೀಸ್ ಠಾಣೆಗೆ ನೀಡಿದ ದೂರಿನ ಆಧಾರದ ಮೇಲೆ ದಿನಾಂಕ 28-12-1998 ರಂದು ಮೊಕದ್ದಮೆ ಸಂಖ್ಯೆ : 22:98 ಕಲಂ ಮನುಷ್ಯ ಕಾಣೆಯಾಗಿದ್ದಾರೆ ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತದೆ. ಈ ಪ್ರಕರಣದ ಸಂಕ್ಷಿಪ್ತ ವಿವರಣೆ ಏನೆಂದರೆ, ಶ್ರೀ ಪ್ರಧಾನ ಅಲಿಯಾಸ್ ಬಿಲ್ ಫೇಮಸ್ ಮಾಶಾಳ ಇವರು ದಿನಾಂಕ 18-1-1998 ರಂದು ಬಡದಾಳ ಗ್ರಾಮದಿಂದ ಕಾಣೆಯಾಗಿದ್ದು, ಅವರ ಕಾಣೆಯ ಬಗ್ಗೆ ಕೆಲವು ವ್ಯಕ್ತಿಗಳ ಕೈವಾಡ ಇಬಹುದೆಂದು ಅವರ ಪತ್ನಿ ದೂರಿನಲ್ಲಿ ತಿಳಿಸಿರುತ್ತಾರೆ. ಶ್ರೀ ಮಲ್ಲಿಕಾರ್ಜುನಪ್ಪ, ಪೋಲೀಸ್

ಇನ್ಸ್‌ಪೆಕ್ಟರ್, ಧಾರವಾಡ, ಜಿಲ್ಲಾ ಅಪರಾಧ, ಗುಪ್ತದಳ ವಿಭಾಗ, ಗುಲ್ಬರ್ಗ ಮತ್ತು ಅವರ ಸಿಬ್ಬಂದಿಯನ್ನು ಸದರಿ ಕಾಣೆಯಾಗಿರುವ ವ್ಯಕ್ತಿಯ ಪತ್ತೆ ಮಾಡುವ ಕಾರ್ಯಕೋಸ್ಕರವೇ ನಿಯೋಜಿಸಲಾಗಿದೆ. ಶ್ರೀಮತಿ ಶಾರದಾ ಬಾಯಿ ಅವರು ಸಂಶಯ ವ್ಯಕ್ತಪಡಿಸಿರುವ ವ್ಯಕ್ತಿಗಳನ್ನು ಪ್ರಶ್ನಿಸುತ್ತಿದ್ದು ಅವರು ತಪ್ಪಿತಸ್ಥರೆಂದು ಕಂಡು ಬಂದರೆ ಅವರ ವಿರುದ್ಧ ಕಾನೂನಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ ತಪ್ಪಿಸಿಕೊಂಡಿರುವ ವ್ಯಕ್ತಿಯನ್ನು ಪತ್ತೆ ಹಚ್ಚಲು ಎಲ್ಲ ಪ್ರಯತ್ನ ಮಾಡಲಾಗುತ್ತಿದೆ. ಅಧ್ಯಕ್ಷರೇ, ಇದರ ಬಗ್ಗೆ ಈಗಾಗಲೇ ಕೆಲವು ಜನರನ್ನು ಪ್ರಶ್ನೆ ಮಾಡಿದ್ದಾರೆ. ಇನ್ನೂ ಹಲವಾರು ಮಾಹಿತಿಗಳನ್ನು ಪೋಲೀಸರು ಸಂಗ್ರಹ ಮಾಡುತ್ತಿದ್ದಾರೆ. ಗುಪ್ತದಳದ ಅಧಿಕಾರಿ ಸಿಬ್ಬಂದಿಯನ್ನು ಇದಕೋಸ್ಕರವೇ ನಿಯೋಜಿಸಲಾಗುತ್ತಿದೆ. ಹಗಲೂರಾತ್ರಿ ಈ ಕೆಲಸ ಮಾಡುತ್ತಿದ್ದಾರೆ ಹಶ್ಮಿಯವರೆ, ನಿಮ್ಮಲ್ಲೂ ಹೆಚ್ಚಿನ ಮಾಹಿತಿ ಇದ್ದರೆ ಗುಪ್ತದಳದ ಇನ್ಸ್‌ಪೆಕ್ಟರ್‌ಗೆ ಕೊಡಿ, ಇದರ ಬಗ್ಗೆ ಎಲ್ಲಾ ಕಾರ್ಯಕ್ರಮ ಕೈಗೊಂಡು ಕಾಣೆಯಾಗಿರುವ ವ್ಯಕ್ತಿ ಎಲ್ಲಿದ್ದಾರೆ. ಇದರಲ್ಲಿ ಕೈವಾಡ ಇದೆಯೇ ಎಂದುನೋಡಲು ಒಂದು ದಳವನ್ನೇ ನೇಮಿಸಿರುವುದರಿಂದ ಮುಂದೆ ಇದರ ಬಗ್ಗೆ ಮಾಹಿತಿ ಏನಾದರೂ ಸಿಕ್ಕಿದರೆ ಕೂಡಲೇ ನಿಮಗೆ ಒದಗಿಸಿಕೊಡುತ್ತೇನೆ. ಕುಟುಂಬದವರಿಗೂ ಒದಗಿಸುತ್ತೇವೆ.

★ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ: ಅಧ್ಯಕ್ಷರೇ, ಇಂತಹ ಸಾಕಷ್ಟು ಕೇಸ್ ಆಗಿವೆ. ಪ್ರಧಾನರ ಹೆಂಡತಿ ಶಾರದಾಬಾಯಿ ಗುಲ್ಬರ್ಗದಲ್ಲಿದ್ದಾರೆ. ಅವರಿಗೆ ಊಟ ಇಲ್ಲ ಅರಿವೆ ಇಲ್ಲ, ಅವರು ಕಂಪ್ಲೇಂಟ್ ಕೊಟ್ಟರೂ ಅವರನ್ನು ಹೆದರಿಸುತ್ತಿದ್ದಾರೆ, ನೋಡಿ ನಿಮ್ಮದು ಜೀವ ತೆಗೆದುಕೊಂಡು ಬಿಡ್ತೇವೆ. ನಾವು; ನಮ್ಮ ಮೇಲೆ ಕಂಪ್ಲೇಂಟ್ ಕೊಡಬೇಡಿ ಎನ್ನುತ್ತಾರೆ. ಬಿ ಎಸ್‌ಪಿ ಕಡೆಯಿಂದ ನಾವು ಅಫ್ಜಲ್‌ಪುರದಲ್ಲಿ ಗುಲ್ಬರ್ಗದಲ್ಲಿ ಎಸ್‌ಪಿಗೆ ಪರ್ಸನಲಾಗಿ ದೂರು ಕೊಟ್ಟಿದ್ದೇವೆ. ಆಗ ಅವರು ತನಿಖೆ ಶುರುಮಾಡಿದ್ದಾರೆ. ಜನವರಿಯಲ್ಲಿ ಈ ಘಟನೆಯಾಗಿದೆ, ಫೆಬ್ರವರಿ ಮಾರ್ಚಿತನಕ ಏನೂ ಮಾಡಿಲ್ಲ. ಇದು ಫ್ರೀ ಪ್ಲಾನಾಗಿ ಆಗುತ್ತಿದೆ. ಅಫ್ಜಲ್‌ಪುರ ತಾಲ್ಲೂಕಿನಲ್ಲೇ ಈ ಘಟನೆಗಳು ಆಗುತ್ತಿವೆ.

ಅಧ್ಯಕ್ಷರು:- ದೂರು ಯಾವಾಗ ದಾಖಲು ಮಾಡಿದರು?

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:- ಅವರು ಮೊದಲು ಏರಿಯಾ ಸಬ್ ಇನ್‌ಸ್ಪೆಕ್ಟರ್ ಹತ್ತಿರ ಹೋಗಿದ್ದರು: ಏನ್ರಿ ಹೋಗ್ರಿ, ಎಲ್ಲಿಗಾದರೂ ಹೋಗಿ, ದೂರು ಕೊಟ್ಟರೆ ಹಾಗೆ ಮಾಡ್ತೇವೆ ಎಂದು ಇವರು ಹೇಳಿದರು. ಆಮೇಲೆ ನಮ್ಮಲ್ಲಿಗೆ ಬಂದರು, ಆಗ ನಾವು ಎಸ್‌ಪಿ ಹತ್ತಿರ ಹೋಗೆ ಆ ಹೆಣ್ಣುಮಗಳನ್ನು ಕರೆದುಕೊಂಡು ಹೋಗಿ ದೂರು ಕೊಟ್ಟೆವು. ಅಫ್ಜಲ್‌ಪುರದಲ್ಲಿ ಬಿ ಎಸ್‌ಪಿ ಕಡೆಯಿಂದ 10000 ಜನರ ರ್‍ಯಾಲಿ ಮಾಡಿದ ಮೇಲೆ ಅದನ್ನು ನೋಡುತ್ತಿದ್ದಾರೆ. ಆದ್ದರಿಂದ ನಾನು ಕೇಳುತ್ತಿರುವುದು, ಆ ಹೆಣ್ಣುಮಕ್ಕಳಿಗೆ ರಕ್ಷಣೆ ಬೇಕು, ವಿಶೇಷವಾಗಿ ಶೆಡ್ಯೂಲ್ಡ್ ಕ್ಯಾಸ್ಟ್ ಹಿಂದುಳಿದ ವರ್ಗಗಳ ಜನರ ಮೇಲೆ ಪ್ರೀಪ್ಲಾನಾಗಿ ಇದು ಆಗುತ್ತಿದೆ. ಮೊದಲು ನಮಗೆ ರಕ್ಷಣೆ ಕೊಡಿ. ಯಾರಿದ್ದಾರೆ ಯಾರಿಲ್ಲ ಎಂದು ತನಿಖೆ ಮಾಡಿ. ನಮ್ಮಗಳ ರಕ್ಷಣೆಗಾಗಿ ಏನುಕ್ರಮ ಕೈಗೊಳ್ಳುತ್ತದೆ ಎಂದು ಸರ್ಕಾರಕ್ಕೆ ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ: - ಅವರು ಹೇಳುತ್ತಿರುವುದು ಮೊದಲು ಠಾಣೆಗೆ ಹೋಗೆ ದೂರು ಕೊಟ್ಟಾಗ ಅಲ್ಲಿ ದೂರು ತೆಗೆದು ಕೊಳ್ಳಲಿಲ್ಲ. ಕಡೆಗೆ ಇವರು ಬಿ ಎಸ್‌ಪಿಯ ರ್‍ಯಾಲಿ ಮಾಡಿ ಪೋಲೀಸ್ ಇಲಾಖೆ ಮೂಲಕ ಒತ್ತಡ ತಂದಾದ ಮೇಲೆ 28-2-98 ರಂದು ಮೊಕದ್ದಮೆಯನ್ನು ದಾಖಲು ಮಾಡಿಕೊಂಡರು ಎಂದು ಈ ಆಪಾದನೆ ಬಗ್ಗೆ ಇಲಾಖೆ ವತಿಯಿಂದ ನಾವು ತನಿಖೆ ಮಾಡುತಿತದ್ದೇವೆ. ಅದರಲ್ಲೇನಾದರೂ ಸತ್ಯ ಇದ್ದರೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಎರಡನೆಯದು,

ಅವರ ಹೆಂಡತಿ ಗುಲ್ಬರ್ಗದಲ್ಲಿರುವವರು, ಅವರನ್ನು ಬಹುಶ: ಈ ಕೆಲಸದ ಹಿಂದೆ ಇದ್ದ ಕೆಲವೇ ವ್ಯಕ್ತಿಗಳೇ ಅವರಿಗೆ ಬೆದರಿಕೆ ಹಾಕುತ್ತಿರುವರೆಂದು. ಆ ಮಹಿಳೆಗೆ ಪೋಲೀಸ್ ಇಲಾಖೆ ರಕ್ಷಣೆ ಕೊಡಬೇಕಾಗಿರುವ ಜವಾಬ್ದಾರಿಯನ್ನೂ ಕೂಡ ನಮ್ಮ ಇಲಾಖೆ ನಿರ್ವಹಿಸುತ್ತದೆ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:- ಇಂತಹ ಘಟನೆ ಮತ್ತೆ ಆಗಬಾರದು, ಜನ ಎಲ್ಲಾ ಸಂಘಟಿತರಾಗುತ್ತಿದ್ದಾರೆ, ಮತ್ತೆ ಇದರಿಂದ ಕೌಂಟರ್ ಆಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಅಧ್ಯಕ್ಷರೇ, ಕಡಿದಾಳ್ ಎಂಬ ಹಳ್ಳಿ ಇರುವುದು ಬಾರ್ಡರ್‌ನಲ್ಲಿ, ಆಳಂದ್ ಮತ್ತು ಅಫಜಲಪುರ ಬಾರ್ಡರಿನಲ್ಲಿ ಇಂತಹ ಘಟನೆಗಳು ಯಾವಾಗಲೂ ನಡೆಯುತ್ತಿರುತ್ತವೆ ಇಲ್ಲಿ ಅಪರಾಧ ಮಾಡುವುದು ಆ ಕಡೆ ಮಹಾರಾಷ್ಟ್ರಕ್ಕೆ ಹೋಗಿ ಉಳಿದುಕೊಳ್ಳುವುದು. ಅನೇಕ ಸಾರಿ ಪೋಲೀಸರೇ ಬುಕ್ ಮಾಡುವುದು. ಕೊನೆಗೆ ಯಾರಾದರೂ ಮುಖಂಡರು ಫೋನ್ ಮಾಡಿದರೆ ಕೇಸ್ ರಿಜಿಸ್ಟರ್ ಆಗುತ್ತದೆ, ಅವರಿಗಿಂತ ಹೆಚ್ಚಿನ ಒತ್ತಡ ತರುವವರು ಇದ್ದರೆ ಕೇಸೂ ಬುಕ್ ಆಗುವುದಿಲ್ಲ. ಇಂತಹ ಪರಿಸ್ಥಿತಿ ಆ ಭಾಗದಲ್ಲಿದೆ. ಈ ಬಾರ್ಡರ್ ಏರಿಯಾದಲ್ಲಿ ಆ ಕಡೆ ಸೋಲ್ಲಾಪುರದವರು ಅಲ್ಲ ಅಪರಾಧ ಮಾಡಿ ಈ ಕಡೆ ಉಳಿಯುತ್ತಾರೆ. ಆದ್ದರಿಂದ ಪೋಲೀಸರು ಎಚ್ಚರಿಕೆ ತೆಗೆದುಕೊಳ್ಳಬೇಕು. ಇಲ್ಲಾಂದರೆ ಯಾರು ತಪ್ಪು ಮಾಡುತ್ತಿದ್ದಾರೋ ಅವರಿಗೆ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ. ಮತ್ತು ಪ್ರಭಾವಿ ರಾಜಕಾರಣಿಗಳು ಆ ಭಾಗದಲ್ಲಿರುವುದರಿಂದ ಇಂಧನವರಿಗೆ ರಕ್ಷಣೆ ಕೊಡುವುದೂ ಕಾಣುತ್ತದೆ. ದ ದಯವಿಟ್ಟು ಇದನ್ನು ಆಗಕೊಡಬಾರದು. ಬಿ ಎಸ್ ಪಿಯವರೇನೋ ರ್ಯಾಲಿ ಮಾಡಿದರು, ಆಯಿತು, ಬೇರೆಯವರಿಗೇನಿದೇ? ಅನೇಕ ಕೇಸಸ್‌ನಲ್ಲಿ ಸುಟ್ಟು ಹಾಕಿರುವುದನ್ನೂ ಕೇಳಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ:- ಅಫ್ಜಲಪುರ ಮತ್ತು ಆಳಂದ್ ಗಡಿಪ್ರದೇಶ. ಈ ತರಹದ ಘಟನೆಗಳಾಗುತ್ತಿದೆ. ಹೊರಗಡೆಯಿಂದ ಬಂದು ಮಾಡಿ ಆಚೆಕಡೆಗೆ ಹೋಗಿಬಿಡುತ್ತಾರೆ. ಅಲ್ಲಿ ಸ್ವಲ್ಪ ಮಟ್ಟಿಗೆ ಪ್ರಭಾವ ಇದ್ದರೆ ಪ್ರಕರಣ ದಾಖಲಾಗುತ್ತವೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಅಲ್ಲಿರುವ ಎಸ್ ಪಿ ಮತ್ತು ಡಿ ಐಜಿಯವರಿಗೆ ಸಂದೇಶ ಕೊಟ್ಟು ಇಂತಹ ಪ್ರಕರಣ ಮರುಕಳಿಸದಂತೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

(ಇ) ಬೆಳಗಾಂ ಶಾಸಕರಾದ ಶ್ರೀ ಬಿ.ಟಿ. ಪಾಟೀಲ್ ರವರ ಮೇಲೆ ಹಲ್ಲೆ

Sri. B.I. Patil (Uchagaon): Sir, I have put the Calling Attention Notice regarding the attack on me and my other workers at Achar Galli, Shahapur, Belgaum, on 16.02.1998. The persons who attacked on me, I do not call them as B.J.P workers, they are goondas and wild animals . This Calling Attention Notice has been supported bythe Hon'ble Leader of the Opposition Sri Mallikarjuna Kharge, Sri Vatal Nagaraj, Sri K.S. Puttanaiah, Sri Narayana Rao Tarale, Sri Syed Julfikar Hashmi and others. I want a reply from the Hon'ble Ministers.